ಆಯುಕ್ತರು
ಕಾರ್ಮಿಕ ಆಯುಕ್ತರ ಕಛೇರಿ

ಕರ್ನಾಟಕ ಸರ್ಕಾರ
ಕಾರ್ಮಿಕ ಇಲಾಖೆ

"ಕಾರ್ಮಿಕ ಭವನ", ಐಟಿಐ ಕಾಲೇಜ್ ಕಾಂಪೌಂಡ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 029
ಕಛೇರಿ: 080 2975 3078
ಇಮೇಲ್ : labour.commissioner42@gmail.com

ಸಂಖ್ಯೆ: ಐಡಿಎ-1/ಸಿಆರ್-38/2020-21,

ದಿನಾಂಕ 27-08-2020

**ರಾಜೀ ಸಂಧಾನ ಸಭೆ ಸೂಚನಾ ಪತ್ರ**

ವಿಷಯ: ಅರವಿಂದ್ ಲೈಫ್ ಸ್ಟೈಲ್ ಬ್ರಾಂಡ್ಸ್ ಲಿಮಿಟೆಡ್ ಸಂಸ್ಥೆಯಲ್ಲಿ ಗುತ್ತಿಗೆ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ ರೇವಣ್ಣ ಹಾಗು ಇತರ 62 ಕಾರ್ಮಿಕರನ್ನು ಖಾಯಂ ನೌಕರರೆಂದು ಪರಿಗಣಿಸಬೇಕೆಂದು ಗಾರ್ಮೆಂಟ್ & ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಇವರು ಸಲ್ಲಿಸಿರುವ ದೂರು ಅರ್ಜಿಯ ಬಗ್ಗೆ

ಉಲ್ಲೇಖ: ಗಾರ್ಮೆಂಟ್ & ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ಬೆಂಗಳೂರು ಇವರ ದೂರು ಅರ್ಜಿ ದಿನಾಂಕ 26-08-2020.

ಗಾರ್ಮೆಂಟ್ & ಟೆಕ್ಸ್ ಟೈಲ್ ವರ್ಕರ್ಸ್ ಯೂನಿಯನ್,.ಬೆಂಗಳೂರು ಇವರು ದಿನಾಂಕ 26-08-2020 ರಲ್ಲಿ ಈ ಕಛೇರಿಗೆ ಒಂದು ಅರ್ಜಿ ಸಲ್ಲಿಸಿ, ಅದರಲ್ಲಿ ಅರವಿಂದ್ ಲೈಫ್ ಸ್ಟೈಲ್ ಬ್ರಾಂಡ್ಸ್ ಲಿಮಿಟೆಡ್ ಸಂಸ್ಥೆಯಲ್ಲಿ ಗುತ್ತಿಗೆ ಕಾರ್ಮಿಕರಾಗಿ ಕೆಲಸ ನಿರ್ವಹಿಸುತ್ತಿರುವ ಶ್ರೀ ರೇವಣ್ಣ ಹಾಗು ಇತರ 62 ಕಾರ್ಮಿಕರನ್ನು ಖಾಯಂ ನೌಕರರೆಂದು ಪರಿಗಣಿಸಬೇಕೆಂಬ ಬೇಡಿಕೆ ಬಗ್ಗೆ ಬಗ್ಗೆ ತಮ್ಮ ಹಾಗು ಆಡಳಿತವರ್ಗದವರ ಮಧ್ಯೆ ಸಂಧಾನ ನಡೆಸಬೇಕೆಂದು ವಿನಂತಿಸಿರುತ್ತಾರೆ ( ಪ್ರತಿ ಲಗತ್ತಿಸಿದೆ)

ಈ ದೂರು ಅರ್ಜಿಯನ್ನು ಕೈಗಾರಿಕಾ ವಿವಾದ ಕಾಯಿದೆ 1947 ರ ಕಲಂ 12(1) ರಡಿಯಲ್ಲಿ ನೊಂದಾಯಿಸಿಕೊಂಡು, ಕಾರ್ಮಿಕ ಸಂಘ ಹಾಗು ಆಡಳಿತವರ್ಗದವರ ಮಧ್ಯೆ ಸಂದಾನ ನಡೆಸಲು ಪ್ರಥಮ ಸಂಧಾನ ಸಭೆಯನ್ನು **ದಿನಾಂಕ 07-09-2020 ರ ಬೆ.11-00** ಘಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ನಿಗದಿಪಡಿಸಿದೆ. ಈ ಸಂದಾನ ಸಭೆಗೆ ಉಭಯಪಕ್ಷಗಳು ಹಾಜರಾಗಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಅಪರ ಕಾರ್ಮಿಕ ಆಯುಕ್ತರು ಹಾಗು
ರಾಜೀ ಸಂದಾನಾಧಿಕಾರಿಗಳು,
ಕೈಗಾರಿಕಾ ಬಾಂಧವ್ಯ.

ಇವರಿಗೆ:

1. ಆಡಳಿತವರ್ಗ, ಅರವಿಂದ್ ಲೈಫ್ ಸ್ಟೈಲ್ ಬ್ರಾಂಡ್ಸ್ ಲಿಮಿಟೆಡ್, 8ನೇ ಮಹಡಿ, Dupark Trinity, F M Kariyappa Colony, M G Road, Shivajinagar, Bengaluru-560001.
2. ಕಾರ್ಮಿಕ ವರ್ಗ, ಅಧ್ಯಕ್ಷರು, ಗಾರ್ಮೆಂಟ್ & ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ನಂ 17/1, ಬಿಎಂಟಿಸಿ ಬಸ್ ಸ್ಟಾಪ್ ಹತ್ತಿರ, ಹೊಸ ಗುಡ್ಡದಹಳ್ಳಿ, ಮೈಸೂರು ರಸ್ತೆ, ಬೆಂಗಳೂರು-026.